ನಿರಾಶ್ರಿತ ವಿದ್ಯಾರ್ಥಿಗಳಿಗೆ ಖರ್ಚು ಮಾಡುತ್ತಿರುವ ಹಣ

೧೧೭೦. ಶ್ರೀ ಜಿ. ರಾಜೂಗೌಡ.—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಸಮಾಜ ಕಲ್ಯಾಣ ಸಚಿವರ ಪರವಾಗಿ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸಮಾಜ ಕಲ್ಯಾಣ ಇಲಾಖೆಯಿಂದ ನಡೆಸಲಾಗುತ್ತಿರುವ ನಿರಾಶ್ರಿತ, ವಿದ್ಯಾರ್ಥಿ ನಿಲಯದಲ್ಲಿರುವ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ಒಬ್ಬರಿಗೆ ಎಷ್ಟು ವೆಚ್ಚ ಮಾಡಲಾಗುತ್ತಿದೆ?

ಆ) ಅದೇ ರೀತಿ ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ವಿದ್ಯಾರ್ಥಿನಿಲಯದ ಒಬ್ಬ ವಿದ್ಯಾರ್ಥಿಗೆ ಒಂದು ತಿಂಗಳಿಗೆ ಎಷ್ಟು ವೆಚ್ಚ ಮಾಡಲಾಗುತ್ತಿದೆ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).

ಅ) ಸಮಾಜ ಕಲ್ಯಾಣ ಇಲಾಖಾವತಿಯಿಂದ ನಿರಾಶ್ರಿತ ವಿದ್ಯಾರ್ಥಿನಿಲಯಗಳು ನಡೆಸುತ್ತಿಲ್ಲ.

ಆ) ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಇಲಾಖೆಯು ನಡೆಸುತ್ತಿರುವ ೨ ಅನಾಥಾಲಯಗಳ ವಿದ್ಯಾರ್ಥಿಗಳಿಗೆ ಒಂದು ತಿಂಗಳಿಗೆ ಒಬ್ಬರಿಗೆ ರೂ. ೮೦-೦೦ ಗಳನ್ನು ವೆಚ್ಚ ಮಾಡಲಾಗುತ್ತಿದೆ.

ಪರಿಶಿಷ್ಟ ಜಾತಿ ಜನಾಂಗಕ್ಕೆ ಕಾನೂನು ಸಲಹೆಗಾರರ ಪುನರ್ ನೇಮಕಕ್ಕೆ ಒತ್ತಾಯ

೧೧೭೬. ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು (ಸಮಾಜ ಕಲ್ಯಾಣ ಸಚಿವರ ಪರವಾಗಿ) ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಇಲಾಖಾವತಿಯಿಂದ ಪರಿಶಿಷ್ಟ ಜಾತಿ ಜನಾಂಗದವರಿಗಾಗಿ ಉಚಿತ ಕಾನೂನು ನೆರವು ನೀಡಲು ಸರ್ಕಾರವು ಜಿಲ್ಲೆಗೊಬ್ಬರಂತೆ ಕಾನೂನು ಸಲಹೆಗಾರರನ್ನು ನೇಮಿಸಿದ್ದು ನಿಜವೇ?

ಆ) ೧೯೮೬ರಲ್ಲಿ ಈ ಹುದ್ದೆ ರದ್ದುಗೊಂಡಿದ್ದು, ಈ ಜನಾಂಗಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈಗಿನ ಉಚಿತ ಕಾನೂನು ನೆರವು ಮಂಡಳಿಗಳಿಂದ ಈ ವರ್ಗದ ಜನರಿಗೆ ಸಮರ್ಥ ರೀತಿಯಲ್ಲಿ ನೆರವು ದೊರಕದಿರುವುದು ನಿಜವೇ?

ಈ) ಹಾಗಿದ್ದಲ್ಲಿ, ಈ ಹಿಂದಿನಂತೆ ಜಿಲ್ಲಾ ಕಾನೂನು ಸಲಹೆಗಾರರನ್ನು ಪುನರ್ ನೇಮಕ ಮಾಡುವ ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).

ಅ) ಹೌದು.

ಆ) ಇಲ್ಲ.

ಇ) ಇಲ್ಲ.

ಈ) ಉದ್ಭವಿಸುವುದಿಲ್ಲ.

ಹಾಸನದಲ್ಲಿ ರೇಷ್ಮೆ ಬಟ್ಟೆ ಕೈಗಾರಿಕೆ

೧೧೯೫. ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ).—ಮಾನ್ಯ ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಹಾಸನ ಜಿಲ್ಲೆಯಲ್ಲಿ ಎಷ್ಟು ಎಕರೆಗಳಲ್ಲಿ ರೇಷ್ಮೆ ಬೆಳೆಯಾಗುತ್ತದೆ;

ಆ) ರೇಷ್ಮೆ ಬೆಳೆಯಿಂದ ಕಳೆದ ಮೂರು ವರ್ಷಗಳಿಂದ ವರ್ಷವೊಂದಕ್ಕೆ ಎಷ್ಟು ರೇಷ್ಮೆ ಗೂಡು ಉತ್ಪತ್ತಿಯಾಗುತ್ತದೆ (ವಿವರ ಒದಗಿಸುವುದು)

ಇ) ಹಾಸನ ಜಿಲ್ಲೆಯಲ್ಲಿ ಉತ್ಪತ್ತಿಯಾದ ರೇಷ್ಮೆ ಗೂಡಿನಿಂದ ರೇಷ್ಮೆದಾರ ತೆಗೆಯಲು ಸರ್ಕಾರವು ಏನು ಕ್ರಮ ಕೈಗೊಂಡಿದೆ ವಿವರ ಕೊಡಿ;

ಈ) ಹಾಸನ ಜಿಲ್ಲೆಯಲ್ಲಿ ರೇಷ್ಮೆ ಬಟ್ಟೆಯನ್ನೇನಾದರೂ ತಯಾರಿಸುವ ಕೈಗಾರಿಕೆಯನ್ನು ಸ್ಥಾಪಿಸಲು ಸರ್ಕಾರವು ಉದ್ದೇಶಿಸಿದೆಯೇ ?

ಶ್ರೀ ಎಂ. ಎಸ್. ಆತ್ಮಾನಂದ (ರೇಷ್ಮೆ ಸಚಿವರು).—

ಅ) ೭೫.೫ ಎಕರೆಗಳಲ್ಲಿ

ಆ) ವಿವರಗಳು

	ಟನ್‌ಗಳಲ್ಲಿ	
೧೯೮೭–೮೮	೧೯೮೮–೮೯	೧೯೮೯–೯೦
೩೨೨.೭೮೧	೪೨೭.೬೧೯	೬೭೮.೬೨೯

ಇ) ೧) ೧೦ ಶೆಡ್‌ಗಳಿರತಕ್ಕಂಥ ೧ ರೀಲಿಂಗ್ ಕಾಂಪ್ಲೆಕ್ಸ್ ಘಟಕ ಸ್ಥಾಪಿಸಲಾಗಿದೆ. ಪ್ರತಿಯೊಂದು ಶೆಡ್ಡಿನಲ್ಲಿ ಒಂದು ಕಾಟೇಜ್ ಬೇಸಿನ್‌ನ (೫ ರಿಂದ ೬ ಬೇಸಿನ್‌ಗಳು) ಘಟಕ ಸ್ಥಾಪನೆಗೆ ಅವಕಾಶ ಕಲ್ಪಿಸಿದೆ,

೨) ಚನ್ನರಾಯಪಟ್ಟಣ ತಾಲ್ಲೂಕು ಮಾರೇನಹಳ್ಳಿಯಲ್ಲಿ ಒಂದು ರೇಷ್ಮೆ ನೂಲು ಬಿಚ್ಚಾಣಿಕೆ ಹಾಗೂ ತರಬೇತಿ ಕೇಂದ್ರ ಸ್ಥಾಪಿಸಲಾಗಿದೆ.

೩) ರೇಷ್ಮೆ ನೂಲು ಬಿಚ್ಚುವವರಿಗೆ (ಬೆಲೆ ಸ್ಥಿರೀಕರಣ ನಿಧಿ) ಯೋಜನೆಯಡಿಯಲ್ಲಿ ೧ ಕೆ. ಜಿ. ರೇಷ್ಮೆಗೆ ೩೦ ರೂ. ಗಳಂತೆ ಸಹಾಯಧನವನ್ನು ನೀಡಲಾಗುತ್ತಿದೆ.

೪) ರೇಷ್ಮೆ ಇಲಾಖೆಯಂ ರೇಷ್ಮೆ ಕೈಗಾರಿಕಾ ಕೋಶವು ಸರ್ಕಾರಿ ನೂಲು ಬಿಚ್ಚಾಣಿಕೆ ಘಟಕಗಳಿಗೆ ಈ ವಿಭಾಗದಿಂದ ಗೂಡನ್ನು ಕೊಳ್ಳುತ್ತದೆ.

ಈ) ಇಲ್ಲ.

ಹಾಸನ ಕ್ಷೇತ್ರದಲ್ಲಿ ವಿದ್ಯುತ್ ಒದಗಿಸಿದ ನೀರಾವರಿ ಬಾವಿಗಳ ಸಂಖ್ಯೆ.

೧೨೯೧. ಶ್ರೀ ಕೆ: ಹೆಚ್. ಹನುಮೇಗೌಡ (ಹಾಸನ),—ಮಾನ್ಯ ಕೈಗಾರಿಕೆ, ಇಂಧನ ಮತ್ತು ಪಕ್ಷ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಹಾಸನ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ವರ್ಷ ಒಂದಕ್ಕೆ ಎಷ್ಟೆಷ್ಟು ನೀರಾವರಿ ಬಾವಿಗಳಿಗೆ (ಬೋರ್‌ವೆಲ್‌ಗಳು ಸೇರಿ) ವಿದ್ಯುತ್ ಕೊಡಲಾಗಿದೆ (ವರ್ಷವಾರು ವಿವರ ಒದಗಿಸುವುದು),

ಆ) ಎಷ್ಟು ಬೋರ್‌ವೆಲ್ ಮತ್ತು ನೀರಾವರಿ ಬಾವಿಗಳಿಗೆ ಪವರ್ ಸಪ್ಲೈ ಕೇಳಿ ಎಷ್ಟು ಜನ ರೈತರ ಅರ್ಜಿಗಳು ಹಾಸನ ಕೆ. ಇ. ಬಿ. ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರ ಆಫೀಸ್‌ನಲ್ಲಿ ಇತ್ಯರ್ಥವಾಗದೇ ಉಳಿದಿದೆ ?

ಶ್ರೀ ಎಸ್. ಎಂ. ಯಾಹ್ಯಾ (ಕೈಗಾರಿಕೆ, ಇಂಧನ ಮತ್ತು ಪಕ್ಷ್ ಸಚಿವರು).—

ಅ) ಹಾಸನ ಕ್ಷೇತ್ರದಲ್ಲಿ ಕಳೆದ ಮೂರು ವರ್ಷಗಳಿಂದ ನೀರಾವರಿ ಬಾವಿಗಳಿಗೆ (ಬೋರ್‌ವೆಲ್‌ಗಳು ಸೇರಿ) ವಿದ್ಯುದ್ದೀಕರಿಸಲಾದ ನೀರಾವರಿ ಪಂಪುಸೆಟ್ಟುಗಳ ವರ್ಷವಾರು ವಿವರಗಳು ಕೆಳಕಂಡಂತಿದೆ ;

ವರ್ಷ	ವಿದ್ಯುದ್ದೀಕರಿಸಲಾದ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ
೧೯೮೭–೮೮	೨೪೩
೧೯೮೮–೮೯	೧೯೮
೧೯೮೯–೯೦	೧೮೨